**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

## ಕರ್ನಾಟಕ ವಿಧಾನ ಪರಿಷತ್ತು

19ನೇ ಫೆಬ್ರವರಿ 2018
ಸೋಮವಾರ

## ವಿಷಯಾನುಕ್ರಮಣಿಕೆ

1. **ಸಂತಾಪ ಸೂಚನೆ:**

**ಹಿರಿಯ ರೈತ ಮುಖಂಡರು ಹಾಗೂ ಪ್ರಸ್ತುತ ವಿಧಾನ ಸಭೆಯ ಸದಸ್ಯರಾಗಿದ್ದ ಶ್ರೀ ಕೆ.ಎಸ್. ಪುಟ್ಟಣ್ಣಯ್ಯನವರ ನಿಧನದ ಬಗ್ಗೆ.**

- **ಶ್ರೀ ಎಂ.ಆರ್. ಸೀತಾರಾಂ (ಸಭಾ ನಾಯಕರು)**
- **ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)**

– – – –

**ಕರ್ನಾಟಕ ವಿಧಾನ ಪರಿಷತ್ತು**

ಸೋಮವಾರ, 19 ನೇ ಫೆಬ್ರವರಿ 2018

ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ

ಬೆಳಗ್ಗೆ *11 ಗಂಟೆ 13 ನಿಮಿಷಕ್ಕೆ* ಸಮಾವೇಶಗೊಂಡಿತು.

ಸಭಾಪತಿ (ಶ್ರೀ ಡಿ.ಹೆಚ್.ಶಂಕರಮೂರ್ತಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**01. ಸಂತಾಪ ಸೂಚನೆ**

**ವಿಷಯ: ಹಿರಿಯ ರೈತ ಮುಖಂಡರು ಹಾಗೂ ಪ್ರಸ್ತುತ ವಿಧಾನ ಸಭೆಯ ಸದಸ್ಯರಾಗಿದ್ದ ಶ್ರೀ ಕೆ.ಎಸ್. ಪುಟ್ಟಣ್ಣಯ್ಯನವರ ನಿಧನದ ಬಗ್ಗೆ.**

ಸಭಾಪತಿಯವರುಃ- ಸಭೆಯ ಗಮನಕ್ಕೆ ಒಂದು ದುಃಖದ ಸಂಗತಿಯನ್ನು ತರಲು ಇಷ್ಟಪಡುತ್ತೇನೆ. ಇದು ನನ್ನ ದೌರ್ಭಾಗ್ಯ.

(ಹೇಳಿಕೆಯನ್ನು ಲಗತ್ತಿಸಿದೆ)

ಶ್ರೀ ಎಂ.ಆರ್. ಸೀತಾರಾಂ (ಸಭಾನಾಯಕರು)ಃ- ಮಾನ್ಯ ಸಭಾಪತಿಯವರೇ, ಹಾಲಿ ವಿಧಾನಸಭಾ ಸದಸ್ಯರು ಹಾಗೂ ಕಳೆದ ಮೂರುವರೆ ದಶಕಗಳಿಂದ ರೈತ ಸಮುದಾಯದ ಕಾರ್ಯಕರ್ತನಾಗಿ ಸೇವೆ ಮಾಡಿದ ಶ್ರೀ ಪುಟ್ಟಣ್ಣಯ್ಯವರು ನಿನ್ನೆ ರಾತ್ರಿ ನಿಧನರಾದ ವಿಷಯ ತಿಳಿದು ನಮಗೆಲ್ಲರಿಗೂ ಅಘಾತವಾಗಿದೆ. ವಿಶೇಷವಾಗಿ ಕಳೆದ ನಾಲ್ಕೂವರೆ ವರ್ಷಗಳಲ್ಲಿ ಅವರು ಮಂಡ್ಯ ಇರಬಹುದು ಅಥವಾ ಇತರ ಕಡೆಗಳಲ್ಲಿನ ರೈತರ ಆರೋಗ್ಯ ಸಮಸ್ಯೆ ಉಂಟಾದಾಗ ಅವರೇ ಆಸ್ಪತ್ರೆಗೆ ದಾಖಲು ಮಾಡಿಸಿ, ನನ್ನ ಹತ್ತಿರ ಬಂದು ಅವರ ಚಿಕಿತ್ಸೆಗೆ ಹಣ ಇರುವುದಿಲ್ಲ, ಕಡಿಮೆ ಮಾಡಿ ಎಂದು ಕೇಳಿಕೊಂಡು ರೈತರ ಸಮಸ್ಯೆಗಳ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ ಸೇವೆ ಮಾಡಿದ್ದಾರೆ. ಕೆಳಗಿನ ಮನೆಯಲ್ಲಿ ಎರಡು ಬಾರಿ ಶಾಸಕರಾಗಿ ಸೇವೆ ಸಲ್ಲಿಸಿದ್ದು, ಈಗ ಅವರು ಅಕಾಲಿಕವಾಗಿ ಮರಣ ಹೊಂದಿದ್ದಾರೆ. ಏಕೆಂದರೆ ಅವರು ಸಂಪೂರ್ಣವಾಗಿ ರೈತರ ಸೇವೆಯಲ್ಲಿ ತೊಡಗಿಸಿಕೊಂಡು, ಸೇವಾ ಮನೋಭಾವದಿಂದ ಅವರ ಜೀವನವನ್ನೇ ಮುಡುಪಾಗಿಟ್ಟಿದ್ದರು. ಅವರು ನಿನ್ನೆ ತೀರಿಕೊಂಡಿರುವುದು ಇಡೀ ರಾಜ್ಯ ಮತ್ತು ವಿಶೇಷವಾಗಿ ರೈತ ಸಮುದಾಯಕ್ಕೆ ಹೆಚ್ಚಿನ ನಷ್ಟವಾಗಿದೆ. ಈ ನಷ್ಟವನ್ನು ಭರಿಸುವ ಶಕ್ತಿಯನ್ನು ಭಗವಂತನು ಅವರ ಕುಟುಂಬ ವರ್ಗ ಹಾಗು ನಮಗೆಲ್ಲರಿಗೂ ನೀಡಲಿ. ಎಲ್ಲ ರೈತ ನಾಯಕರಿಗೆ ಅವರು ನಡೆದು ಬಂದ ದಾರಿ ಮಾದರಿಯಾಗಿರಲಿ ಎಂದು ಹಾರೈಸಿ, ಅವರ ದುಃಖದಲ್ಲಿ ಅವರ ಕುಟುಂಬದವರ ಜೊತೆ ನಾವೆಲ್ಲರೂ ಭಾಗವಹಿಸುತ್ತಿದ್ದೇವೆ ಎಂಬ ಸಂದೇಶವನ್ನು ಅವರ ಕುಟುಂಬದವರಿಗೆ ಕಳುಹಿಸುವುದು ಒಳ್ಳೆಯದು ಎಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)ಃ- ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣಯ್ಯ ತೀರಿಹೋದರು ಎಂದು ನಂಬುವುದಕ್ಕೆ ಆಗುವುದಿಲ್ಲ. ಶ್ರೀ ಪುಟ್ಟಣ್ಣಯ್ಯ ಎಂದು ಹೇಳುತ್ತಿದ್ದ ಹಾಗೆ ನಮ್ಮ ಕಣ್ಣ ಮುಂದೆ ಒಬ್ಬ ಹೋರಾಟಗಾರರ ಬರುತ್ತಾನೆ. ತಾವು ನೀಡಿದ ಹೇಳಿಕೆಯಲ್ಲಿ ಹೋರಾಟದ ಬದುಕನ್ನು ಕಟ್ಟಿಕೊಂಡಿದ್ದರು, ರೈತಪರ ಕಾರ್ಯಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದರು, ಸಂಘವನ್ನು ಮುನ್ನೆಸುತ್ತಿದ್ದರು ಹಾಗೂ ಯಶಸ್ವಿ ಹೋರಾಟಗಾರರು ಮತ್ತು ಸರಳ ಸಜ್ಜನಿಕೆಯ ರಾಜಕಾರಣಿ ಎಂದು ಬರೆದಿದ್ದೀರಿ. ಈ ಎಲ್ಲಾ ಪದಗಳಿಗೂ ಇವತ್ತಿನ ರಾಜಕೀಯ ಕ್ಷೇತ್ರ ಇರಬಹುದು ಅಥವಾ ಯಾವುದೇ ಹೋರಾಟದ ಕ್ಷೇತ್ರದಲ್ಲಿ ಶ್ರೀಯುತ ಪುಟ್ಟಣ್ಣಯ್ಯನವರು ತಮ್ಮದೇ ಆದ ಛಾಪನ್ನು ಮೂಡಿಸಿದ್ದಾರೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂಬುದರಲ್ಲಿ ಯಾವುದೇ ಅನುಮಾನ ಇಲ್ಲ. ಯಾವುದೇ ವ್ಯಕ್ತಿ ಪ್ರಾರಂಭದಲ್ಲಿ ಒಂದೇ ಸಾರಿಗೆ ಹೋರಾಟಗಾರ ಆಗುವುದಿಲ್ಲ. ಅವನ ಮುಂದೆ ಒಂದು ಗುರಿ ಇರುತ್ತದೆ. ಬಡವರಿಗೆ ನ್ಯಾಯ ಸಿಗಬೇಕು, ರೈತರ ಪರವಾಗಿ ಹೋರಾಟ ಮಾಡಬೇಕು. ಕಾರ್ಮಿಕ ಸಂಘಟನೆಯ ನಾಯಕರಾದರೆ ಕಾರ್ಮಿಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಹೋರಾಟ ಮಾಡಬೇಕು. ವಿದ್ಯಾರ್ಥಿ ಸಂಘಟನೆಗಳಲ್ಲಿ ವಿದ್ಯಾರ್ಥಿಗಳ ಪರವಾಗಿ ಹೋರಾಟ ಮಾಡಬೇಕು. ಧಾರ್ಮಿಕ ಕ್ಷೇತ್ರಗಳಲ್ಲಿ ಧರ್ಮವನ್ನು ಉಳಿಸುವುದಕ್ಕೆ ಹೋರಾಟ ಮಾಡಬೇಕು. ಇದು ಹೋರಾಟದ ಒಂದು ಕಿಚ್ಚು. ಇವತ್ತು ನಾವು ಅನೇಕ ಕ್ಷೇತ್ರಗಳಲ್ಲಿ ನೋಡಿದ್ದಂತೆ ಹೋರಾಟದ ಕಿಚ್ಚನ್ನು ಇಟ್ಟುಕೊಂಡು ಬೆಳೆಯುತ್ತಿರುವ ನಾಯಕರು ಪಕ್ಷ ಮತ್ತು ಸಂಘಟನೆಗಳಲ್ಲಿ ಬರಬರುತ್ತಾ ಆ ಹೋರಾಟಗಾರರು ಒಂದು ಜಾತಿಗೆ ಸೀಮಿತವಾಗಿ ಬಿಡುತ್ತಾರೆ. ಇದು ದುರ್ದೈವ. ಇದಲ್ಲದೇ ಅವರ ಹಿಂಬಾಲಕರನ್ನು ಕಟ್ಟಿಕೊಳ್ಳುತ್ತಾರೆ. ಯಾವ ಉದ್ದೇಶಕ್ಕೆ ಹೋರಾಟವನ್ನು ಮಾಡಿದರೋ, ಆ ಹೋರಾಟ ನಿಜಕ್ಕೂ ಮರೆತು ಹೋಗುತ್ತಾರೆ. ಇಡೀ ಸಮಾಜಕ್ಕೆ ಆದರ್ಶವಾಗಿರಬೇಕು ಎನ್ನುವ ಕಲ್ಪನೆಯಿಂದ ಮುನುಗ್ಗುತ್ತಾರೋ, ಆ ಕಲ್ಪನೆಯ ಉದಾತ್ತ ಧ್ಯೇಯ-ಧೋರಣೆಗಳು ಪಕ್ಕಕ್ಕೆ ಸರಿಯುತ್ತಾ ಹೋಗುತ್ತಿರಬಹುದು ಎಂಬ ಭಯ ಬರುತ್ತದೆ.

(ಮುಂದು)

118/19.02.2018/11.20/ಹೆಚ್‌ವಿಃಕೆಎಸ್

**ಶ್ರೀ ಕೆ.ಎಸ್.ಈಶ್ವರಪ್ಪ(ಮುಂದುವರೆದದ್ದು):-**

ಸನ್ಮಾನ್ಯ ಸಭಾಪತಿಯವರೇ, ಯಾವುದೇ ಸಂಘಟನೆಗಳಿಗೆ, ವ್ಯಕ್ತಿಗಳಿಗೆ ಅಥವಾ ಸಕ್ಕರೆ ಕಾರ್ಖಾನೆ ಮಾಲೀಕರಿಗೆ ಮಾನ್ಯ ಪುಟ್ಟಣ್ಣಯ್ಯನವರು ಬಗ್ಗಲಿಲ್ಲ. ರೈತ ಪರ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ವಿಧಾನಸಭಾ ಸದಸ್ಯರಾಗುವುದಕ್ಕೂ ಮೊದಲು ರೈತರ ಪರ ಹೋರಾಟ ಮಾಡುತ್ತಿದ್ದವರು, ವಿಧಾನಸಭಾ ಸದಸ್ಯರಾದ ಮೇಲೂ ಆ ಹೋರಾಟವನ್ನು ಮುಂದುವರಿಸಿಕೊಂಡು ಬಂದಿದ್ದರು. 'ಕನ್ನಡ ಪರ ಸಂಘಟನೆ'ಗಳು, 'ದಲಿತ ಪರ ಸಂಘಟನೆ'ಗಳೆಂದು ಮತ್ತು 'ಧಾರ್ಮಿಕ ಸಂಘಟನೆ'ಗಳೆಂದು ಅನೇಕ ಸಂಘಟನೆಗಳು ಕಾರ್ಯನಿರ್ವಹಿಸುತ್ತಿವೆ. ಆದರೆ, ಕೆಲವೊಮ್ಮೆ ಆ ಸಂಘಟನೆಗಳ ಮುಖಂಡರು ಆ ಸಂಘಟನೆಗಳನ್ನು ನಂಬಿಕೊಂಡಿರುವ ಜನರನ್ನು ಮತ್ತು ಕಾರ್ಯಕರ್ತರನ್ನು ಪಕ್ಕಕ್ಕೆ ಸರಿಸಿ ತಾವು ಮಾತ್ರ ದೊಡ್ಡವರಾಗುವ ಪ್ರಯತ್ನವನ್ನು ಮಾಡುವುದರ ಜೊತೆಗೆ ತಮ್ಮ ಜಾತಿ ಹಾಗೂ ದುಡ್ಡಿನ ಆಧಾರದ ಮೇಲೆ ಕೆಲವು ಹಿಂಬಾಲಕರನ್ನು ಕಟ್ಟಿಕೊಂಡು ಮುಂದುವರೆಯುತ್ತಿರುವುದು ನಮ್ಮ ದುರ್ದೈವವಾಗಿದೆ. ನೈತಿಕತೆ ಎನ್ನುವ ಪದಗಳಿಗೆ ಈಗ ಬೆಲೆ ಇಲ್ಲದೇ ಇರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎನ್ನುವ ಮಾತನ್ನು ಬಹಳ ನೊಂದು ಹೇಳುತ್ತಿದ್ದೇನೆ. ಯಾವುದೇ ವ್ಯಕ್ತಿಗಳನ್ನು ಅಥವಾ ಸಂಘಟನೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ನಾನು ಈ ಮಾತುಗಳನ್ನು ಹೇಳುತ್ತಿಲ್ಲ. ಈ ಸದನದಲ್ಲಿ ಉಪಸ್ಥಿತರಾಗಿರುವಂತಹ ಎಲ್ಲ ರಾಜಕಾರಣಿಗಳು, ಅಧಿಕಾರಿಗಳು ಮತ್ತು ಪತ್ರಕರ್ತರಿಗೆ ಆದರ್ಶ ವ್ಯಕ್ತಿಗಳು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಿಗುವುದು ಬಹಳ ವಿರಳವಾಗಿದೆ. ಈ ದೇಶದ ಬಗ್ಗೆ ಯುವ ಜನಾಂಗ ಒಂದು ಕನಸ್ಸನ್ನು ಕಟ್ಟಿಕೊಂಡು ಹೋಗುತ್ತಿರುವ ಈ ಸಂದರ್ಭದಲ್ಲಿ ಯಾವ ವ್ಯಕ್ತಿಯನ್ನು ಆದರ್ಶವಾಗಿ ಇಟ್ಟುಕೊಳ್ಳಬೇಕು, ಯಾರಿಗೆ ನೈತಿಕತೆ ಇದೆ, ಜಾತಿಯಿಂದ ಹೊರತಾಗಿ ಯಾರಿದ್ದಾರೆ, ದುಡ್ಡನ್ನು ಬಿಟ್ಟು ಯಾರಿದ್ದಾರೆ, ಹಿಂಬಾಲಕರನ್ನು ಬಿಟ್ಟು ಯಾರಿದ್ದಾರೆ ಮತ್ತು ತನ್ನ ಹೋರಾಟದಿಂದ ಯಾವುದಾದರೊಂದು ಕ್ಷೇತ್ರಕ್ಕೆ ನ್ಯಾಯವನ್ನು ಒದಗಿಸಿಕೊಡುವ ವ್ಯಕ್ತಿಗಳು ಯಾರಾದರೂ ಇದ್ದಾರೆಯೇ ಎಂದು ನೋಡಿದರೆ, ನಮ್ಮ ಕಣ್ಮುಂದೆ ಬರುವ ವ್ಯಕ್ತಿಗಳ ಸಂಖ್ಯೆ ಬಹಳ ವಿರಳವಾಗಿದೆ. ಅವರುಗಳಲ್ಲಿ ಮಾನ್ಯ ಪುಟ್ಟಣ್ಣಯ್ಯನವರೂ ಒಬ್ಬರಾಗಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಮೃತರ ಸಂತಾಪ ಸೂಚನೆಯಲ್ಲಿ ಉಲ್ಲೇಖ ಮಾಡಿರುವ ಪದಗಳಿಗೆ ನಿಜಕ್ಕೂ ಒಂದು ತೂಕವಿದೆ ಹಾಗೂ ಅವು ಸತ್ಯಕ್ಕೆ ಹತ್ತಿರವಾದ ಪದಗಳಾಗಿವೆ. ಮಾನ್ಯ ಪುಟ್ಟಣ್ಣಯ್ಯನವರು ಹೋರಾಟದ ಬದುಕನ್ನು ಕಟ್ಟಿಕೊಂಡು ರೈತಪರ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಅವರ ವ್ಯಕ್ತಿತ್ವದ ಬಗ್ಗೆ ಎಲ್ಲಿಯೂ ಕಪ್ಪುಚುಕ್ಕೆ ಎನ್ನುವುದು ಇರಲಿಲ್ಲ. ರೈತ ಸಂಘಟನೆಯನ್ನು ಮುಂದುವರೆಸಿಕೊಂಡು ಹೋಗುವ ನಿಟ್ಟಿನಲ್ಲಿ ಅವರು ಸಾಕಷ್ಟು ಪ್ರಯತ್ನಗಳನ್ನು ಮಾಡಿದ್ದರು. ಅದರಲ್ಲಿ ಎಷ್ಟರಮಟ್ಟಿಗೆ ಯಶಸ್ವಿಯಾಗಿದ್ದರು ಎನ್ನುವುದಕ್ಕಿಂತ ಹೆಚ್ಚಾಗಿ ಯುವಕರಿಗೆ ಆಶಾಕಿರಣದ ರೂಪದಲ್ಲಿದ್ದರು ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ನಾನು ಗಮನಿಸಿದಂತೆ, ವಿಧಾನಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಿ ಮಾತನಾಡುವಂತಹ ಸಂದರ್ಭದಲ್ಲಿ ಅವರು ಧ್ವನಿ ಏರಿಸಿ ಮಾತನಾಡುತ್ತಿರಲಿಲ್ಲ. ಬದಲಿಗೆ ಅವರ ಮಾತನ್ನು ಯಾರು ಅರ್ಥ ಮಾಡಿಕೊಳ್ಳಬೇಕು ಅವರು ಅರ್ಥ ಮಾಡಿಕೊಳ್ಳುವ ರೀತಿಯಲ್ಲಿ ಚುಚ್ಚಿ ಮಾತನಾಡುವ ಮೂಲಕ ದೊರೆಯಬೇಕಾಗಿರುವ ನ್ಯಾಯವನ್ನು ಪಡೆದುಕೊಳ್ಳುವ ಪ್ರಯತ್ನ ಮಾಡುತ್ತಿದ್ದರು ಮತ್ತು ನಿರಂತರವಾಗಿ ರೈತಪರ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದರು. ಮಾನ್ಯ ಪುಟ್ಟಣ್ಣಯ್ಯನವರು ನಿಜಕ್ಕೂ ಒಬ್ಬ ಯಶಸ್ವಿ ಹೋರಾಟಗಾರರಾಗಿದ್ದರು ಎನ್ನುವುದರ ಜೊತೆಗೆ ಒಬ್ಬ ಸರಳ-ಸಜ್ಜನ ರಾಜಕಾರಣಿಯಾಗಿದ್ದರು. ಇತ್ತೀಚಿನ ದಿನಗಳಲ್ಲಿ ಸರಳ-ಸಜ್ಜನ ರಾಜಕಾರಣಿ ಎನ್ನುವ ಮಾತುಗಳು ಕೇವಲ ನಾಲಿಗೆ ತುದಿಯ ಮಾತುಗಳಾಗಿ ಉಳಿದುಕೊಂಡಿವೆ. 'ರಾಜಕಾರಣಿ'ಗಳಿಗೆ ಜನರು ಯಾವುದೋ ಒಂದು ಸ್ಥಾನವನ್ನು ಕೊಟ್ಟುಬಿಟ್ಟಿದ್ದಾರೆ. ಇದು ನಮ್ಮ ದುರ್ದೈವವಾಗಿದೆ. ಆದರೆ, ಮಾನ್ಯ ಪುಟ್ಟಣ್ಣಯ್ಯನವರು ಅದಕ್ಕೆ ಅಪವಾದವಾಗಿದ್ದರು.

ಸನ್ಮಾನ್ಯ ಸಭಾಪತಿಯವರೇ, ಯುವಕರಿಗೆ ಆದರ್ಶಪ್ರಾಯವಾಗಿ ಮತ್ತು ನೈತಿಕತೆಯ ಹಿನ್ನೆಲೆಯಲ್ಲಿ ಜನಪರ ಹೋರಾಟ ಮಾಡುತ್ತಿದ್ದ ಮಾನ್ಯ ಪುಟ್ಟಣ್ಣಯ್ಯನವರನ್ನು ಇಂದು ನಾವು ಕಳೆದುಕೊಂಡಿದ್ದೇವೆ. ಇವರ ನಿಧನದಿಂದಾಗಿ ಅವರ ಕುಟುಂಬಕ್ಕೆ ಅನ್ಯಾಯವಾಗಿದೆ ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ. ವಿದೇಶದಲ್ಲಿರುವ ಅವರ ಮಕ್ಕಳು ಮರಳಿ ಬಂದ ಮೇಲೆ ಅವರ ಅಂತಿಮ ಸಂಸ್ಕಾರವನ್ನು ನಡೆಸಲಾಗುವುದೆಂದು ಹೇಳಲಾಗುತ್ತಿದೆ. ಅವರ ಕುಟುಂಬಕ್ಕಿಂತಲೂ ಹೆಚ್ಚಾಗಿ ಕರ್ನಾಟಕ ರಾಜ್ಯದ ರೈತ ಸಮೂಹ ಒಬ್ಬ ದೊಡ್ಡ ಹೋರಾಟಗಾರರನ್ನು ಕಳೆದುಕೊಂಡಿರುವ ದುಃಖದಲ್ಲಿದೆ. ಎಲ್ಲ ಸಂಘಟನೆಗಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೋರಾಟಗಾರರಿಗೆ ಮಾರ್ಗದರ್ಶಕರ ರೂಪದಲ್ಲಿ ಪುಟ್ಟಣ್ಣಯ್ಯನವರು ಇದ್ದರು. ಅವರು ತಮ್ಮ ನೈತಿಕ ವಿಚಾರಗಳನ್ನು ಮಾರಾಟ ಮಾಡಿಕೊಂಡಿರಲಿಲ್ಲ. ಯಾವುದೇ ಜಾತಿಗೆ ಬಗ್ಗಲಿಲ್ಲ. ಹಿಂಬಾಲಕರನ್ನು ಇಟ್ಟುಕೊಂಡಿರಲಿಲ್ಲ. ಈ ರೀತಿ ಇಡೀ ರೈತ ಸಮೂಹಕ್ಕಾಗಿ ಹೋರಾಟ ಮಾಡಿದ ವ್ಯಕ್ತಿಯನ್ನು ನಾವಿಂದು ಕಳೆದುಕೊಂಡಿದ್ದೇವೆ. ಶ್ರೀಯುತರು ಯಾವ ದಿಕ್ಕಿನಲ್ಲಿ ಹೋರಾಟವನ್ನು ನಡೆಸುತ್ತಿದ್ದರೋ ಆ ದಿಕ್ಕಿನಲ್ಲಿಯೇ ನಾವು ಹೋರಾಟವನ್ನು ಮುಂದುವರೆಸಿಕೊಂಡು ಹೋದರೆ ಮೃತರ ಆತ್ಮಕ್ಕೆ ಶಾಂತಿ ದೊರೆಯುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ.

ಭಗವಂತನು ಮೃತರ ಆತ್ಮಕ್ಕೆ ಶಾಂತಿಯನ್ನು ಕರುಣಿಸಲಿ, ಅವರು ತೋರಿಸಿರುವ ದಾರಿಯಲ್ಲಿ ನಾವೆಲ್ಲರೂ ನಡೆಯೋಣ ಎನ್ನುವ ಮಾತನ್ನು ಹೇಳುತ್ತಾ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಸಭಾಪತಿಯವರುಃ-** ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಭರಿಸುವ ಶಕ್ತಿಯನ್ನು ಭಗವಂತನು ಅವರ ಕುಟುಂಬ ವರ್ಗಕ್ಕೆ ಕರುಣಿಸಲಿ. ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಒಂದು ನಿಮಿಷ ಎದ್ದು ನಿಂತು ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**(ಈ ಹಂತದಲ್ಲಿ ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನಾಚರಿಸಲಾಯಿತು)**

**ಸಭಾಪತಿಯವರುಃ-** ಸದನದಲ್ಲಿ ಪ್ರಸ್ತಾಪಿಸಿದ ಸಂತಾಪ ಸೂಚನೆಯನ್ನು ಮೃತ ಗಣ್ಯರ ಕುಟುಂಬ ವರ್ಗದವರಿಗೆ ಕಳುಹಿಸಲಾಗುವುದು.

ಮಾನ್ಯ ಸದಸ್ಯರುಗಳಲ್ಲಿ ನನ್ನ ಮನಸ್ಸಿನ ಮಾತನ್ನು ಹೇಳಿಕೊಳ್ಳುವುದಕ್ಕೆ ಬಯಸುತ್ತಿದ್ದೇನೆ. ಮಾನ್ಯ ಪುಟ್ಟಣ್ಣಯ್ಯನವರು ವಿಧಾನಸಭೆಯ ಹಾಲಿ ಸದಸ್ಯರಾಗಿದ್ದವರು. ಅವರು ಇಂದು ನಮ್ಮನ್ನು ಅಗಲಿದ್ದಾರೆ. ವಿಧಾಸಭೆ ಅಥವಾ ವಿಧಾನ ಪರಿಷತ್ತಿನ ಯಾವುದೇ ಸದಸ್ಯರು ಸದನ ನಡೆಯುತ್ತಿರುವ ಸಂದರ್ಭದಲ್ಲಿ ನಮ್ಮನ್ನು ಅಗಲಿದರೆ, ಅವರ ಗೌರವಾರ್ಥ ಅಂದಿನ ಸಭೆಯನ್ನು ಮುಂದೂಡುವುದು ಸೂಕ್ತ ಎನ್ನುವ ತೀರ್ಮಾನದ ಹಿನ್ನೆಲೆಯಲ್ಲಿ ಮೃತರ ಗೌರವಾರ್ಥ ಸದನವನ್ನು ನಾಳೆ ಬೆಳಗ್ಗೆ 11 ಗಂಟೆಯವರೆಗೆ ಮುಂದೂಡಲಾಗುತ್ತಿದೆ.

**(ಸದನವು ಬೆಳಗ್ಗೆ 11 ಗಂಟೆ 26 ನಿಮಿಷಗಳಿಗೆ ಮುಕ್ತಾಯಗೊಂಡು ಪುನಃ ದಿನಾಂಕ 20ನೇ ಫೆಬ್ರವರಿ ಮಾಹೆ 2018ರ ಮಂಗಳವಾರದಂದು ಬೆಳಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಲಾಯಿತು.)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"